# ಗೌರವಯುತ ಬದುಕಿಗಾಗಿ, ಗಾರ್ಮೆಂಟ್ಸ್ ಕಾರ್ಮಿಕರಿಗೆ ರೂ. 12.000ಗಳ ವೇತನ ಆಗ್ರಹಿಸಿ, ರಾಷ್ಟ್ರ ಮಟ್ಟದ ನ್ಯಾಯಾಧಿಕರಣ

# ಸಮಾರೋಪ ಸಭೆ

ದಿನಾಂಕ: 25-11-2012, ಭಾನುವಾರ
ಸಮಯ: ಬೆಳಿಗ್ಗೆ 10-00 ಕ್ಕೆ

ಸ್ಥಳ:
**'ಉನ್ನತಿ' ಸಭಾಂಗಣ,** ಮಹಿಳಾ ಸೇವಾ ಸಮಾಜ,
ಪಂಪಮಹಾಕವಿ ರಸ್ತೆ, ಶಂಕರಪುರ
(ನ್ಯಾಷನಲ್ ಕಾಲೇಜ್ ಈಜುಕೊಳದ ಪಕ್ಕ)

ಗಾರ್ಮೆಂಟ್ಸ್ ಕಾರ್ಮಿಕರಿಗೆ ಬದುಕುವ ವೇತನಕ್ಕಾಗಿ ಆಗ್ರಹಿಸಿ, ರಾಷ್ಟ್ರಮಟ್ಟದ ನ್ಯಾಯಾಧಿಕರಣವೊಂದನ್ನು ಬೆಂಗಳೂರು, ಚೆನ್ನೈ, ದೆಹಲಿ, ಗುರಗಾಂವ್, ತಿರುಪೂರ್‌ನ ಹಲವಾರು ಯೂನಿಯನ್‌ಗಳು ಹಾಗೂ ಸಂಘಟನೆಗಳ ಸಹಯೋಗದಲ್ಲಿ ಆಯೋಜಿಸಲಾಗಿದೆ. ಈ ನ್ಯಾಯಾಧಿಕರಣದಲ್ಲಿ ಖ್ಯಾತ ನ್ಯಾಯವಾದಿಗಳಾದ ಶ್ರೀಮತಿ ಹೇಮಲತಾ ಮಹಿಷಿಯವರೂ ಒಳಗೊಂಡಂತೆ ದೇಶ ವಿದೇಶಗಳ ನುರಿತ ತಜ್ಞರು ಜ್ಯೂರಿಗಳಾಗಿ ಪಾಲ್ಗೊಳ್ಳಲಿದ್ದಾರೆ. ದಿನಾಂಕ, ನವೆಂಬರ್ 22 ಹಾಗೂ 23 ರಂದು 'ಕನ್ನಡ ಸಾಹಿತ್ಯ ಪರಿಷತ್'ನಲ್ಲಿ ನಡೆಯುವ ಈ ನ್ಯಾಯಾಧಿಕರಣದಲ್ಲಿ ಕಾರ್ಮಿಕರು, ಮಾಲೀಕರು, ಸರ್ಕಾರದ ಪ್ರತಿನಿಧಿಗಳು ಎಲ್ಲರೂ ಭಾಗವಹಿಸಲಿದ್ದಾರೆ.

ಆತ್ಮೀಯ ಕಾರ್ಮಿಕರೇ,

ಗಾರ್ಮೆಂಟ್ಸ್ ಕಾರ್ಮಿಕರಾದ ನಾವು ನಮ್ಮ ವೇತನವನ್ನು ಹೆಚ್ಚಿಸಬೇಕೆಂದು ಹಲವಾರು ವರ್ಷಗಳಿಂದ ಹೋರಾಟ ನಡೆಸುತ್ತಲೇ ಬಂದಿದ್ದೇವೆ. ಈಗಲೂ ನಾವು ಪಡೆಯುತ್ತಿರುವುದು ತಿಂಗಳಿಗೆ 4500 ರಿಂದ 5000ರೂ. ನಾವು ಹೆಚ್ಚು ವೇತನವನ್ನು ಕೇಳಿದಾಗಲೆಲ್ಲ, ಮಾಲೀಕರು ಕಾರ್ಖಾನೆ ಮುಚ್ಚುವುದಾಗಿ, ಬೇರೆ ದೇಶಕ್ಕೆ ಹೋಗುವುದಾಗಿ ನಮ್ಮನ್ನು ಬೆದರಿಸುತ್ತಲೇ ಇರುತ್ತಾರೆ. ಇದರ ಕಾರಣದಿಂದಲೇ ಏಷ್ಯಾದ ಗಾರ್ಮೆಂಟ್ಸ್ ಕಾರ್ಮಿಕರಿಗೆ ಒಂದೇ ರೀತಿಯ ವೇತನಕ್ಕಾಗಿ ಆಗ್ರಹಿಸಿ ಆಂದೋಲನಗಳು ನಡೆಯುತ್ತಿವೆ.

ಇಷ್ಟು ಕಡಿಮೆ ವೇತನ ಪಡೆಯುತ್ತಾ, ನಮ್ಮ ಸಾಮರ್ಥ್ಯ ಮೀರಿದ ಪ್ರೊಡಕ್ಷನ್ ಕೊಡಬೇಕಾದ ಒತ್ತಡ, ಮೇಲಾಧಿಕಾರಿಗಳ ದೌರ್ಜನ್ಯ ಸಹಿಸುತ್ತಾ, ಆರೋಗ್ಯ ಮತ್ತು ಸುರಕ್ಷತೆಗೆ ಯಾವುದೇ ಕಾಳಜಿ ಇಲ್ಲದೆ ಪ್ರತಿನಿತ್ಯ ಭೀತಿಯಿಂದ ಕೆಲಸ ಮಾಡುತ್ತಿದ್ದೇವೆ. ಕಾರ್ಮಿಕ ಕಾನೂನುಗಳು ಸಮರ್ಪಕವಾಗಿ ಜಾರಿಯಾಗುತ್ತಿಲ್ಲ. ನಮ್ಮ ಕಾರ್ಖಾನೆಗಳು ಇದ್ದಕ್ಕಿದ್ದಂತೆ ಸ್ಥಳಾಂತರವಾಗುತ್ತಿವೆ, ಮುಚ್ಚುತ್ತಿವೆ. ಈ ಎಲ್ಲದರ ವಿರುದ್ಧ ಹೋರಾಡಲು ನಮ್ಮ ಸಂಘಟನಾ ಪ್ರಯತ್ನಗಳನ್ನು ಆಡಳಿತವರ್ಗವು ಒಡೆಯುತ್ತಿವೆ. ಯೂನಿಯನ್ ಸದಸ್ಯರನ್ನು ನಾನಾ ರೀತಿಯಲ್ಲಿ ಶೋಷಿಸುತ್ತಿವೆ.

ಈ ಎಲ್ಲ ಸಮಸ್ಯೆಗಳ ವಿರುದ್ಧ ನಾವು ಹೋರಾಡುತ್ತಲೇ ಬಂದಿದ್ದೇವೆ. ಆದರೆ ನಮ್ಮ ಧ್ವನಿಯನ್ನು ಸರ್ಕಾರಕ್ಕೆ, ಮಾಲೀಕರಿಗೆ ಕೇಳಿಸುವುದರ ಜೊತೆಗೆ ನಾವು ತಯಾರಿಸುವ ಬಟ್ಟೆಗಳನ್ನು, ವಿದೇಶಗಳಲ್ಲಿ ಸಾವಿರಾರು ರೂ.ಗಳಿಗೆ ಮಾರಾಟ ಮಾಡಿ ಲಾಭ ಸಂಪಾದಿಸುತ್ತಿರುವ ಬ್ರಾಂಡ್‌ಗಳಿಗೆ ಕೇಳಿಸಲೇ ಬೇಕಿದೆ. ಏಕೆಂದರೆ, ನಮ್ಮ ಸಮಸ್ಯೆಗಳನ್ನು ಸರಿಪಡಿಸುವಲ್ಲಿ ಅವರ ಹೊಣೆಗಾರಿಕೆಯೂ ಇದೆ. ಗಾರ್ಮೆಂಟ್ಸ್ ಕಾರ್ಮಿಕರು ಗೌರವಯುತವಾಗಿ ಬದುಕಲು ತಿಂಗಳಿಗೆ ಕನಿಷ್ಠ 12,000 ರೂಗಳಾದರೂ ಬೇಕು ಎಂದು ನಾವು ಬ್ರಾಂಡ್‌ಗಳಿಗೆ ಆಗ್ರಹಿಸುವುದು ಅತ್ಯಂತ ಅವಶ್ಯವಾಗಿದೆ.

ಈ ನಿಟ್ಟಿನಲ್ಲಿ **ನವೆಂಬರ್ 22, 23**ರಂದು ಆಯೋಜಿಸಿರುವ **ರಾಷ್ಟ್ರಮಟ್ಟದ ನ್ಯಾಯಾಧಿಕರಣದ** ಸಂದರ್ಭದಲ್ಲಿ ಗಾರ್ಮೆಂಟ್ಸ್ ಕಾರ್ಮಿಕರ ಸಮಸ್ಯೆಗಳನ್ನು ಆಲಿಸಿ, ಸಮಾಲೋಚಿಸಿ, ತಮ್ಮ ತೀರ್ಮಾನವನ್ನು **ದಿನಾಂಕ 25-11-2012** ರಂದು ಜ್ಯೂರಿಗಳು ನೀಡಲಿದ್ದಾರೆ. ಗಾರ್ಮೆಂಟ್ಸ್ ಕಾರ್ಮಿಕರ ಸಮಸ್ಯೆಗಳನ್ನು ಪರಿಹಾರ ಮಾಡುವ ನಿಟ್ಟಿನಲ್ಲಿ ಇದೊಂದು ಮಹತ್ವದ ದಿನವಾಗಿದ್ದು, ಈ ದಿನದಂದು ನೀವೆಲ್ಲರೂ ನಮ್ಮೊಂದಿಗಿರಬೇಕೆಂದು ನಾವು ಈ ಮೂಲಕ ಮನವಿ ಮಾಡಿಕೊಳ್ಳುತ್ತಿದ್ದೇವೆ.

**ಬನ್ನಿ, ನೀವೂ ನಮ್ಮೊಂದಿಗೆ ಪಾಲ್ಗೊಳ್ಳಿ, ನಮ್ಮ ಧ್ವನಿಗೆ ನಿಮ್ಮ ಧ್ವನಿಯನ್ನು ಸೇರಿಸಿ**


## ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ (GATWU)

ನಂ. 17/1, ಮೊದಲನೇ ಮಹಡಿ, ಹೊಸಗುಡ್ಡದ ಹಳ್ಳಿ ಬಸ್‌ನಿಲ್ದಾಣದ ಹತ್ತಿರ, ಹೊಸಗುಡ್ಡದ ಹಳ್ಳಿ, ಮೈಸೂರು ರಸ್ತೆ, ಬೆಂಗಳೂರು: 26
ದೂರವಾಣಿ: 080-26745242, ಮೊಬೈಲ್: 9844714476, 9743675445, ಇಮೇಲ್: gatwu@rediffmail.com